ಜಿಲ್ಲಾ ಪಂಚಾಯಿತ್ ಚಿತ್ರದುರ್ಗ ತಾಲ್ಲೂಕ್ ಪಂಚಾಯಿತ್ ಚಿತ್ರದುರ್ಗ

# ಅಳಗವಾಡಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಅಳಗವಾಡಿ, ಚಿತ್ರದುರ್ಗ ತಾಲ್ಲೂಕು, ಮತ್ತು ಜಿಲ್ಲೆ

ಉಲ್ಲೇಖ : ಗ್ರಾ.ಪಂ.ಅ. ದಿನಾಂಕ : 29/12/16-

ಗೆ.

ಜಿಲ್ಲಾ ಅರಣ್ಯ ಅಧಿಕಾರಿಗಳಿಗೆ
ದಾವಣಗೆರೆ ಜಿಲ್ಲಾ,
ದಾವಣಗೆರೆ.

ಮಾನ್ಯರೆ,

ದಾವಣಗೆರೆ ವಾಲಯದ ನೀರ್ಥಡಿ ಪ್ರದೇಶದಲ್ಲಿ ರಾಂಪುರ ಗ್ರಾಮದಿಂದ ಅಳಗವಾಡಿ ಗ್ರಾಮಕ್ಕೆ ಕುಡಿಯುವ ನೀರಿಗಾಗಿ ಪೈಪ ಲೈನ ಅಳವಾಡಿಸುವ ಬಗ್ಗೆ ಸಮರ್ಥನಾ ಪತ್ರ.

ಮೇಲ್ಕಂಡ ವಿಷಯದ ಬಗ್ಗೆ ತಮ್ಮಲ್ಲಿ ವಿನಂತಿಸಿ ಕೊಳುವುದೇನೆಂದರೆ ನಮ್ಮ ಪ್ರದೇಶದಲ್ಲಿ ಸುಮಾರು ಮೂರು ವರ್ಷಗಳಿಂದಲೂ ಮಳೆ ಬಾರದ ಕಾರಣ, ಬೋರ್‌ವೆಲನಲ್ಲಿ ನೀರು ಪೂರ್ತಿ ನಿಂತು ಹೋಗಿರುತ್ತವೆ ಇದರಿಂದ ಕುಡಿಯಲು ಮತ್ತು ದನ ಕರುಗಳಿಗೆ ನೀರಿಲ್ಲದೆ ತೊಂದರೆಯಾಗಿರುತ್ತದೆ ಇಂತಹ ಪರಿಸ್ಥಿತಿಯಲ್ಲಿ ಹೆಚ್. ರಾಂಪುರ ಗ್ರಾಮದ ಆರ್.ಬಿ.ಸಿದ್ದೇಶ್ ಬಿನ್ ಬಸವಂತಪ್ಪ ಇವರು ತಮ್ಮ ತೋಟದ ಬೋರ್‌ವೆಲನಿಂದ ನೀರುಕೊಡಲು ಒಪ್ಪಿಕೊಂಡಿರುತ್ತಾರೆ. ರಾಂಪುರದಿಂದ ಅಳಗವಾಡಿ ಗ್ರಾಮಕ್ಕೆ ನಿಮ್ಮ ಅರಣ್ಯ ವ್ಯಾಪ್ತಿಯಲ್ಲಿ ಹಾಲಿ ಇರುವ ಬಂಡಿ ದಾರಿಯನ್ನು ಬಿಟ್ಟರೆ ಬೇರೆ ಯಾವ ದಾರಿಯೂ ಸಮರ್ಥನೀಯವಾಗಿರುವುದಿಲ್ಲ (ಸುಮಾರು 2.9 ಕಿ.ಮೀ). ಕಾರಣ ತಾವುಗಳು ಇಂತಹ ಬರಗಾಲ ಪರಿಸ್ಥಿತಿಯಲ್ಲಿ ನಮ್ಮ ಪಂಚಾಯಿತಿ ವತಿಯಿಂದ ಪೈಪ್ ಲೈನ್ ಅಳವಡಿಸಲು ಅನುಮತಿ ನೀಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇವೆ ಮತ್ತು ನಾವುಗಳು ತಮ್ಮ ಅರಣ್ಯಪ್ರದೇಶದ ಬಂಡಿ ದಾರಿಯಲ್ಲಿ ಯಾವ ಗಿಡ ಮರಗಳಿಗು ಹಾನಿಯಾಗದಂತೆ ಪೈಪ್ ಲೈನ್ ಮಾಡಿಸಿಕೊಳುತ್ತೇವೆಂದು ಈ ಮೂಲಕ ಪ್ರಾರ್ಥಿಸುತ್ತೇವೆ.

ಇಂತಿ

ಕಾರ್ಯದರ್ಶಿ
ಗ್ರಾಮ ಪಂಚಾಯಿತಿ, 29/12/16.
ಅಳಗವಾಡಿ, ಚಿತ್ರದುರ್ಗ ತಾ॥

You created this PDF from an application that is not licensed to print to novaPDF printer (http://www.novapdf.com)